ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಶುಕ್ರವಾರ, ದಿನಾಂಕ 19ನೇ ಜುಲೈ, 2019

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಕ್ರಮವಾಗಿ ಜಮೀನನ್ನು ಅಸೋಸಿಯೇಷನ್‌ಗೆ ನೀಡಿರುವ ಬಗ್ಗೆ

ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-

357 (437) ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ನಗರಾಭಿವೃದ್ಧಿ ಇಲಾಖೆಯಿಂದ ಸುವರ್ಣ ಕರ್ನಾಟಕ ರಾಜ್ಯೋತ್ಸವದಡಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಯಾವ ಸಂಘಕ್ಕೆ ಸಗಟು ಹಂಚಿಕೆ ಮಾಡಬೇಕೆಂದು ಆದೇಶವಾಗಿರುತ್ತದೆ; (ಪ್ರತಿ ಒದಗಿಸುವುದು)

(ಆ) ಸದರಿ ಆದೇಶದಂತೆ ಪ್ರಾಧಿಕಾರದಿಂದ ಯಾವ ಸಂಘಕ್ಕೆ ಜಮೀನು ಬಿಡುಗಡೆಯಾಗಿದೆ ಮತ್ತು ಯಾವ ಸಂಘಕ್ಕೆ ನೋಂದಣಿಯಾಗಿದೆ;(ಬಿಡುಗಡೆ ಪ್ರತಿ ಮತ್ತು ನೋಂದಣಿ ಪ್ರತಿ ನೀಡುವುದು) ಒಂದು ಸಂಘಕ್ಕೆ ಜಮೀನು ಬಿಡುಗಡೆಗೊಳಿಸಿ ಮತ್ತೊಂದು ಸಂಘಕ್ಕೆ ನೋಂದಾಯಿಸಲು ಕಾರಣವೇನು ;

(ಇ) ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ. 19(ಪಿ)ರಲ್ಲಿ 1 ಎಕರೆ 28 ಗುಂಟೆ ಜಮೀನನ್ನು ಸಂಘಕ್ಕೆ ನೋಂದಾಯಿತ ಕ್ರಯಪತ್ರ ಮಾಡಿಕೊಡದೆ ಅಕ್ರಮವಾಗಿ ಪರಿಷ್ಕೃತ ಬಡಾವಣೆ ನಕ್ಷೆಯಲ್ಲಿ ಸೇರಿಸಲು ಕಾರಣರಾದವರ ವಿರುದ್ಧ ಕೈಗೊಂಡ ಕ್ರಮಗಳೇನು ;

(ಈ) ಸದರಿ ಗ್ರಾಮದಲ್ಲಿ 33 ಎಕರೆ 02 ಗುಂಟೆ ಜಮೀನಿಗೆ ಕ್ರಯಪತ್ರ ನೋಂದಾಯಿಸಿ, ಪುನಃ ಸರ್ವೆ ಕಾರ್ಯ ನಡೆಸಿ ಲಭ್ಯವಿದ್ದ ಜಮೀನು 27 ಎಕರೆ 15 ಗುಂಟೆ ಎಂದು ತಿದ್ದುಪಡಿ ಕ್ರಯಪತ್ರ ನೋಂದಾಯಿಸಲಾಗಿದೆಯೇ ; ಹಾಗಿದ್ದಲ್ಲಿ, ಸರ್ವೆ ವರದಿ ನೀಡುವುದು; ಇಲ್ಲದಿದ್ದಲ್ಲಿ ಸರ್ವೆ ಕಾರ್ಯ ಕೈಗೊಳ್ಳದೇ ಜಮೀನು ಕಡಿಮೆಯಿದೆ ಎಂದು ಹೇಗೆ ನಿರ್ಧರಿತವಾಗಿದೆ ;

(ಉ) ಪ್ರಾಧಿಕಾರದ ನೌಕರರನ್ನು ಹೊರತುಪಡಿಸಿ ಇತರರಿಗೆ ನಿವೇಶನ ಹಂಚಿಕೆಯಾಗಲು ಆದೇಶವಾಗಿದೆಯೇ ; ಇದ್ದಲ್ಲಿ, ಪ್ರತಿ ಒದಗಿಸುವುದು ; ಇಲ್ಲದಿದ್ದಲ್ಲಿ, ಈ ಅಕ್ರಮಕ್ಕೆ ಕಾರಣರಾದವರ ವಿರುದ್ಧ ಕೈಗೊಂಡ ಕ್ರಮಗಳೇನು ?